ಮಧ್ಯೆ ಅಲ್ಲೇ ಸುಜಾತಳ ಫೋನ್ ಬಂತು. 'ಮನಿ ಬರಸ್ಗೊಂಡ್ರೋ ಇಲ್ಲೋ, ನಿಮ್ಮವ್ವಂದು ಏನ ವ್ಯವಸ್ಥಾ ಮಾಡಿದ್ರಿ?' ಎಂಬ ಮಾಮೂಲಿ ರಾಗ ಹಾಡದೇ ಕುಸುಕುಸು ಅತ್ತಳು. "ಯಾಕ ಸುಜಿ? ಹುಡಗುರು ಆರಾಮ ಇದ್ದಾರಲಾ? ಮತ್ತ ನೀನು?..." ಎಂದು ಕಳವಳದಿಂದಲೇ ಕೇಳಿದೆ. "ನಾವೆಲ್ಲಾ ಆರಾಮಿದ್ದೇವಿ. ಖರೆ... ಅವ್ವ... ನಮ್ಮವ್ವ ಸೋತು ಸಣ್ಣಾಗಿ ಹಾಸಿಗಿ ಹಿಡದುಬಿಟ್ಟಾಳ. ವೈನಿ 'ಮಾಡ್ಲಿಕ್ಕಾಗೂದುಲ್ಲಾ. ಎಲ್ಲರ ವೃದ್ಧಾಶ್ರಮದಾಗಿಡ್ರಿ. ಎಷ್ಟರೆ ಖರ್ಚು ಬಂದ್ರೂ ನಡೀತದ' ಅಂದಬಿಟ್ರು" ಎಂದು ಅಳುವಿನ ನಡುವೆ ಉತ್ತರ ಬಂತು. 'ನೀ ಏನ ಕಡಿಮಿ ಇದ್ದಿ' ಎನಬೇಕೆಂದುಕೊಂಡವ ಸುಮ್ಮನಾದೆ. "ಪಾಪ, ಈ ವಯಸ್ನಾಗ ಭಾಳ ತ್ರಾಸಾಗ್ತದ. ನೀ ಒಂದು ಕೆಲಸಾ ಮಾಡು ಸುಜಿ. ಅಂಥಾ ಪರಿಸ್ಥಿತಿ ಬಂದರ ಅವರ್ನ ಇಲ್ಲೇ ಕರಕೊಂಡು ಬಂದಬಿಡು. ಹೆಂಗೂ ಮನಿ ಧೊಡ್ಡದದ. ನಮ್ಮವ್ವ, ನಿಮ್ಮವ್ವ ಊರ ಸುದ್ದಿ ಮಾತಾಡಕೋತ, ಉಸಾಬರಿ ಮಾಡಕೋತ ಮಲಕೋವಲ್ರ್ಯಾಕ" ಎಂದೆ. ಅದೆಷ್ಟು ಬಲವಾಗಿ ನಾಟಿತು ಅಂತೀರಿ. "ಹ್ಞೂಂ... ನೀವೆಷ್ಟು ಛೊಲೊ ಇದ್ದೀರಿ... ಹ್ಞಂ... ಹ್ಞಂ... ಅತ್ತಿಯವರು ಹೆಂಗಿದ್ದಾರ? ನಾ ಲಗೂನ ಬಂದು ನನ ಕಡಿಂದ ಆದಷ್ಟು ಅವರ ಸೇವಾ ಮಾಡ್ತೇನಿ" ಎಂದಳು. ಕಣ್ಣು, ಮೂಗು ಒರೆಸಿಕೊಂಡಿರಬೇಕು. ನನಗೂ ಮನದ ಭಾರ ಇಳಿದು ಹಗುರವಾದಂತಾಯಿತು. ಮಾಡುವದು ಬಿಡುವದು ಬೇರೆ ಮಾತು. ಇಷ್ಟು ಹೇಳಿದಳಲ್ಲ. "ಹಂಗ... ಅಜಿತ ನಿಮ್ಮನ್ನ ಕೇಳ್ಲಿಕ್ಕತ್ತಿದ್ದಾ. ಅಂವನ ಕಂಪೆನಿಗೆ ಪೈಪುಗೋಳು ಬೇಕಾಗ್ಯಾವಂತ. 'ಬೆಳಗಾವಿ, ಕೊಲ್ಹಾಪುರಕ್ಕ ಕಳಸ್ತಾರೇನು?' ಅಂತ ಕೇಳಿದಾ. ಅಂವನ ಜೋಡಿ ಮಾತಾಡ್ರಿ" ಎಂದಳು. ಬಿಟ್ಟೇನೇ? ಆಗಲೇ ಫೋನ್ ತಿರುಗಿಸಿದೆ. ಮತ್ತೆ ಆರ್ಡರ್‌ಗಳು. "ಒಂದು ತಿಂಗಳದಾಗ ಕಳಸ್ರಿ" ಎಂಬ ಒತ್ತಾಯ. ಅದೃಷ್ಟ ಅಂದರೆ ಹೀಗಿರಬೇಕು. ಇಷ್ಟು ದಿನ ಕವಿದಿದ್ದ ಕಾರ್ಮೋಡ ಚದುರಿ ಬಾಳ ಅಂಗಳದಲ್ಲಿ ಬೆಳಕು ತೂರಿ ಬಂದಿತ್ತು. ಶಿವ ಕರುಣೆ ತೋರಿದ್ದ. ನಿಜವಾಗಿಯೂ ಮನೆ ಬರೆಸಿಕೊಳ್ಳುವ ಅಗತ್ಯವೇ ಇರಲಿಲ್ಲ. ಅವ್ವನೊಡನೆ ಫೋನಿನಲ್ಲಿ ಮಾತನಾಡಿದೆ. "ಸಹನಾ ಇದ್ದಾಳ. ನೀ ಚಿಂತಿ ಮಾಡಬ್ಯಾಡ. ನಿನ್ನ ಕೆಲಸಾ ನೋಡಕೊ. ಹೊತ್ತುಹೊತ್ತಿಗೆ ಊಟಾ ಮಾಡು" ಎಂದು ಹೇಳಿದಳು. ನಿರಾಳವಾದೆ.

ಎಂಟು ದಿನ ಫ್ಯಾಕ್ಟರಿ ಭರಾಟೆಯಿಂದ ಓಡಿತು. ಪುರುಸೊತ್ತಿಲ್ಲದಂತೆ ನಾನೂ ದುಡಿದೆ. ಮನೆ ತಲುಪುವಾಗ ರಾತ್ರಿ ಹನ್ನೆರಡು ಗಂಟೆ. ಈ ಬಾರಿ ತುಂಬಾ ನಿಷ್ಠೆಯಿಂದ ಚೆನ್ನಾಗಿರುವ ಮಾಲನ್ನು ಸಮಯಕ್ಕೆ ಮುನ್ನವೇ ಕಳಿಸಿದ್ದೆ. ಒಂದಷ್ಟು ಪೇಮೆಂಟ್ ಬಂದಿತ್ತು. ಜೊತೆಗೆ ಹೊಸ ಆರ್ಡರ್‌ಗಳೂ ಕೂಡ. ಮೊದಲು ಎಲ್ಲ ಸಾಲಗಳ ಬಡ್ಡಿ ಕಟ್ಟಿದೆ. ಚಿಕ್ಕ ಪುಟ್ಟ ಸಾಲಗಳನ್ನು ತೀರಿಸಿದೆ. ಕೈಯಲ್ಲಿರುವ ಆರ್ಡರ್ಸ್ ತೋರಿಸಿ ದೊಡ್ಡವಕ್ಕೆ ಸಮಯ ಕೇಳಿದೆ. ಶಿವ ಪುರಾಣದ ಬಗ್ಗೆ ಯೋಚಿಸಲು, ಕಪಾಟಿನಡಿಯಲ್ಲಿಟ್ಟ ವೇಷದತ್ತ ನೋಡಲೂ ಸಮಯವಿರಲಿಲ್ಲ. ಆದರೆ ಇನ್ನು ಸುಜಾತ ಬಂದರೆ ಕೆಲಸ ಕೆಟ್ಟು ಹೋಗುವದೆಂದು ಮರುದಿನ ಸೋಮವಾರ ಎಲ್ಲರೂ ಹೊರಗೆ ಹೊರಟ ಮೇಲೆ ಮುಗಿಸಿಬಿಡಬೇಕೆಂಬ ಹುರುಪಿನಲ್ಲಿ ಸಿದ್ಧನಾದೆ. ಈಗ ಮನೆ ಬರೆಸಿಕೊಳ್ಳದೇ ಸಾಲ ತೀರಿಸಬಹುದೆಂಬ ಭರವಸೆ ಮೂಡಿತ್ತು. ಆದರೆ ಸುಜಾತಳ ಮನಸ್ಸು ಹೇಳಲಾಗುವದಿಲ್ಲ. ಮತ್ತೆ ಅದೇ ಹಳೆಯ ಹಾಡು ಹಾಡಿದರೆ... ಡಾಕ್ಟರ್ ಬಂದು ಅವ್ವನನ್ನು ನೋಡಿಕೊಂಡು ಹೋಗಿದ್ದರಂತೆ. "ಬಿ.ಪಿ. ಸ್ವಲ್ಪ ವೇರಿಯೇಷನ್ ಅದ. ಹೆಚ್ಚು ಕಡಿಮಿ ಆದ್ರ ಅಡ್ಮಿಟ್ ಮಾಡೋಣಂತ" ಎಂದು ಫೋನಿನಲ್ಲೇ ಹೇಳಿದ್ದರು. ಕಾಗದ ಪತ್ರವನ್ನು ಬೆಳಿಗ್ಗೆಯೇ ಅವ್ವನ ರೂಮಿನ ಕಪಾಟಿನಲ್ಲಿಟ್ಟಿದ್ದೆ. ಹೋಗಿ ಬರುತ್ತೇನೆಂದು ಅವಳಿಗೆ ಹೇಳಿ ಯಥಾಪ್ರಕಾರ